O.S.41/2011
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 17-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ HKM ವಕೀಲರಿಂದಃ**

1. ನಾನು 3 ನೇ ಪ್ರತಿವಾದಿ ಬೈಲಪ್ಪನ ಸೊಸೆ ಎಂದರೆ ಸರಿ. 2008 ರಲ್ಲಿ ನನ್ನ ಮದುವೆ ಆಗಿರುತ್ತದೆ. ನಾನು ಮದುವೆ ಆಗುವುದಕ್ಕಿಂತ ಮುಂಚೆ ವಾದಿ ಮತ್ತು ಪ್ರತಿವಾದಿ 1, 3 ರಿಂದ 9 ರವರ ಕುಟುಂಬದಲ್ಲಿ ಏನೇನು ವ್ಯವಹಾರಗಳು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಮದುವೆ ಆಗಿ ಬಂದ ನಂತರ ನನಗೆ ವಾದಿಯು ಅವರಿಗೆ ದಾವಾ ಆಸ್ತಿಗಳಲ್ಲಿ ಭಾಗ ನೀಡಿರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ. 1968 ನೇ ಸಾಲಿನಲ್ಲಿ ಕದರಪ್ಪರವರು ಅವರ ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ವಿಭಾಗ ಮಾಡಿಕೊಟ್ಟಿದ್ದು, ಅವರ ಹಿಸ್ಸೆಗಳಲ್ಲಿ ಅವರ ಅವರು ಅನುಭವಿಸಿಕೊಂಡು ಬರುತ್ತಿರುತ್ತಾರೆಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನ್ನ ಮಾವ. 4 ನೇ ಪ್ರತಿವಾದಿ ತಂದೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಭಾಗ ಮಾಡಿಕೊಟ್ಟಿರುತ್ತಾರೆಂದು 4 ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಂಶಗಳು ಸುಳ್ಳಾಗಿರುತ್ತವೆ. 3 ನೇ ಪ್ರತಿವಾದಿ ಈ ದಾವೆ ಮತ್ತು OS 145/2010 ರಲ್ಲಿ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ.

2. ಈ ದಾವೆಯನ್ನು ಸರ್ವೆ ನಂಬರ್ 33 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಬೇಡರ ಅಗ್ರಹಾರ ಗ್ರಾಮದ ಸ. ನಂ 4 ದಾವಾ ಆಸ್ತಿ ಆಗಿದ್ದು , ಸದರಿ ಸ.ನಂ ನ ವಿಸ್ತೀರ್ಣ ಹಾಗೂ ಚಕ್ಕುಬಂದಿ ನನ್ನಿಂದ ಹೇಳಲಾಗುವುದಿಲ್ಲ. ನಾನು ಬಂದ್ರೆಹಳ್ಳಿ ಗ್ರಾಮದ ಆಸ್ತಿಗಳನ್ನು ಮಾತ್ರ ನೋಡಿರುತ್ತೇನೆ. ಬಂದ್ರೇಹಳ್ಳಿ ಗ್ರಾಮದ ಸರ್ವೆ ನಂಬರ್ , ಚಕ್ಕುಬಂದಿಗಳನ್ನು ಹೇಳಲಾಗುವುದಿಲ್ಲ. ವಾದಿ ರತ್ನಮ್ಮರವರು ಓಡಾಡಲು ಆಗುವುದಿಲ್ಲ ಎಂದರೆ ಸರಿ. ಆ ಕಾರಣ ಅವರ ಸರ್ಕಾರಿ ಕಛೇರಿ ಕೆಲಸಗಳನ್ನು 4, 6, 7,8 ನೇ ಪ್ರತಿವಾದಿರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿ 1 ರಿಂದ 4, 6 ರಿಂದ 9 ನೇ ಪ್ರತಿವಾದಿಗಳು ಮೃತಪಟ್ಟಿರುತ್ತಾರೆಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಪ್ಪಾಗಿ ಬರೆಳಚ್ಚು ಆಗಿರುತ್ತದೆ. ನಾನು ಪ್ರತಿವಾದಿ 4,6,7 ಮತ್ತು 8 ರವರ ಪರವಾಗಿ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ವಾದಿ ರತ್ನಮ್ಮನ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರತಿವಾದಿ 3 ತನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ನನ್ನ ಗಂಡ ಒಪ್ಪಿಕೊಂಡಿರುತ್ತಾರೆಂದರೆ ಸರಿ. ಪ್ರತಿವಾದಿ 4 ಮತ್ತು 6, 8 ರವರ ಚಿತಾವಣೆ ಮೇರೆಗೆ ವಾದಿಯು

ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಸದರಿಯವರ ಚಿತಾವಣೆ ಮೇರೆಗೆ ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಾವ ಬೈಲಪ್ಪನವರು ಮಲ್ಲಿಕಣ್ಣರವರಿಂದ 1 ಎಕರೆ ಜಮೀನು, ರಂಗಧಾಮಯ್ಯ ರವರಿಂದ 9 ಗುಂಟೆ ಜಮೀನುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಆಸ್ತಿಗಳ ಚಕ್ಕುಬಂದಿಗಳು ನನ್ನಿಂದ ಹೇಳಲಾಗುವುದಿಲ್ಲ. 4 ನೇ ಪ್ರತಿವಾದಿ ಹೆಸರಿನಲ್ಲಿ ಯಾವ ಆಸ್ತಿಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಬಂದ್ರೇನಹಳ್ಳಿಯಲ್ಲಿ ನಿವೇಶನಗಳು ಇರುತ್ತವೆ ಎಂದರೆ ಒಂದೋ ಎರಡೋ ನಿವೇಶನಗಳು ಇರುತ್ತವೆ. ಮಾವತ್ತೂರು ಗ್ರಾಮದ ಸರ್ವೆ ನಂ 74ರ ಜಮೀನು 4 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬೇಡರಅಗ್ರಹಾರ ಗ್ರಾಮದ ಸರ್ವೆ ನಂ 4 ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಧ್ಯವೆಂಕಟಾಪುರ ಗ್ರಾಮದ ಸರ್ವೆ ನಂ 113, 2 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ. ದಾವಾ 1 ರಿಂದ 3 ನೇ ಆಸ್ತಿಗಳು 2 ನೇ ಪ್ರತಿವಾದಿ ಹೆಸರಿನಲ್ಲಿದ್ದು ಅವರೇ ಸ್ವಾಧೀನದಲ್ಲಿರುತ್ತಾರೆಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.41/2011
ಪಿಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*